1. 1960ನೇ ಇಸವಿಯ ಕರ್ನಾಟಕ ಸಹಕಾರ ಸಂಘಗಳ ನಿಯಮಗಳ 51ನೇ ನಿಯಮಕ್ಕೆ ತಿದ್ದುಪಡಿ ಮಾಡಿರುವ ದಿನಾಂಕ 18ನೇ ಮಾರ್ಚ್ 13ನೇ ಮೇ 1992ರಂದು ಹೊರಡಿಸಲಾದ ಸಿಎಂಡಬ್ಲ್ಯು 551 ಸಿಎಲ್ಎಂ 91ನೇ ಕ್ರಮಾಂಕದ ಅಧಿಸೂಚನೆ ಹಾಗೂ
2. ತಾಲ್ಲೂಕಿಗಿಂತ ಕಡಿಮೆ ಇರುವ ಸಹಕಾರ ಸಂಘಗಳನ್ನು ಹೊರತುಪಡಿಸಿ ಅವುಗಳ ವ್ಯಾಪ್ತಿಯೊಳಗೆ ಬರುವಂತವುಗಳಿಗೆ ವಾರ್ಷಿಕ ಮಹಾಸಭೆ ಹಾಗೂ ಚುನಾವಣೆ ಇನ್ನಿತರೆ ಏನಾದರೂ ಇದ್ದಲ್ಲಿ ಅವುಗಳನ್ನು ನಡೆಸಲು ದಿನಾಂಕಗಳನ್ನು ಪುನರ್ ಗೊತ್ತುಪಡಿಸುವ ಬಗ್ಗೆ ದಿನಾಂಕ 16-3-1991ರಂದು ಹೊರಡಿಸಲಾದ ಸಿಎಂಡಬ್ಲ್ಯು 91 ಸಿಎಲ್ಜಿ 91ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

XVIII. ಶ್ರೀ ಎಂ. ಧಾಮಪ್ಪ (ಇಂಧನ ರಾಜ್ಯ ಮಂತ್ರಿ) ಮಾನ್ಯ ಅಧ್ಯಕ್ಷರೇ,
1948ನೇ ಇಸವಿ ವಿದ್ಯುಚ್ಛಕ್ತಿ (ಸರಬರಾಜು ಅಧಿನಿಯಮ 69(5)ನೇ ಕಲಮಿನ ಮೇರೆಗೆ
1. 1989-90ನೇ ಸಾಲಿನ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಲೆಕ್ಕಗಳ ಮೇಲಿನ ಲೆಕ್ಕ ಪರಿಶೋಧನಾ ವರದಿಯನ್ನು (ವರದಿಯನ್ನು ಸಲ್ಲಿಸುವಲ್ಲಿ ಆಗಿರುವ ವಿಳಂಬದ ಬಗ್ಗೆ ಟಿಪ್ಪಣಿಯೊಂದಿಗೆ ಸಭೆಯ ಮುಂದಿಡುತ್ತೇನೆ.)

1948ನೇ ಸಾಲಿನ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ 75(1)ನೇ ಕಲಮಿನ ಮೇರೆಗೆ.
2. 1990-91ನೇ ಸಾಲಿನ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ವಾರ್ಷಿಕ ಆಡಳಿತ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು : ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಎಸ್. ಬಂಗಾರಪ್ಪ : (ಮುಖ್ಯಮಂತ್ರಿಗಳು)
ಮಾನ್ಯ ಸಭಾಧ್ಯಕ್ಷರೇ,

ಅ) ಭಾರತದ ಸಂವಿಧಾನ 151 (2)ನೇ ಪರಿಚ್ಛೇದದ ಮೇರೆಗೆ ಭಾರತದ ಕಂಟ್ರೋಲರ್ ಹಾಗೂ ಮಹಾ ಲೆಕ್ಕ ಪರಿಶೋಧನಾಧಿಕಾರಿಯವರು ಕರ್ನಾಟಕ ಸರ್ಕಾರದ 1990ನೇ ಸಾಲಿನ ಮಾರ್ಚ್ 31ರ ಅಂತ್ಯದವರೆಗೆ (ರಾಜ್ಯಸ್ವದಿಂದ ಬಂದ ವರಮಾನ) ಸಂಖ್ಯೆ (2) ಸಂಬಂಧಿಸಿದ ವರದಿಯನ್ನು ಒಪ್ಪಿಸುತ್ತೇನೆ. ಮತ್ತು

ಆ) 1971ರ ಕಂಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ (ಕರ್ತವ್ಯ, ಅಧಿಕಾರ ಹಾಗೂ ಸೇವಾ ನಿಬಂಧನೆ) ಅಧಿನಿಯಮದ ಕಲಂ 19(3) ಮೇರೆಗೆ 31ನೇ ಮಾರ್ಚ್ 1991ಕ್ಕೆ ಕೊನೆಗೊಂಡ ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ಲೆಕ್ಕ ತನಿಖಾ ವರದಿ (ವಾಣಿಜ್ಯ)ಯನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು : ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿಯವರು : ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 125(1)ನೇ ನಿಯಮದ ಮೇರೆಗೆ
ರಾಜ್ಯಸಭೆಯಿಂದ ಬಂದ 1992ನೇ ಇಸವಿಯ ಸಂವಿಧಾನದ (76ನೇ ತಿದ್ದುಪಡಿ) ವಿಧೇಯಕದ ಪ್ರತಿಯೊಂದಿಗೆ ಸ್ವೀಕರಿಸಿದ ಸಂದೇಶವನ್ನು ಸಭೆಯ ಮುಂದೆ ಇಡುತ್ತೇನೆ.
ಅಧ್ಯಕ್ಷರು : ಮಂಡಿಸಲಾಯಿತು.